

ಕೂರಿಸಲು ಮೆಟ್ಟಿಲುಗಳನ್ನು ಜೋಡಿಸಿ. ಪಟ್ಟದ ಗೊಂಬೆಗಳನ್ನು, ಕಳಶ, ದೇವರುಗಳ ಸಾಲು ಸಾಂಪ್ರದಾಯಿಕ ರೀತಿಯಲ್ಲೇ ಇರಲಿ. ಮಕ್ಕಳಿಗೆ ಪುರಾಣ ಪ್ರಸಂಗಗಳನ್ನು ಪರಿಚಯಿಸುವ ಸಲುವಾಗಿ ಸೀತಾ ಸ್ವಯಂವರ, ಅಶ್ವಮೇಧಯಾಗ, ಭಕ್ತಧ್ರುವ, ಏಕಲವ್ಯನ ಬಿಲ್ಲುಗಾರಿಕೆ, ಶ್ರವಣಕುಮಾರನ ಮಾತಾಪಿತೃ ಪ್ರೇಮ ಇವುಗಳ ಜೊತೆಗೆ ದೇಶಭಕ್ತರ ತ್ಯಾಗ, ಬಲಿದಾನ, ಗಾಂಧಿಯವರ ಸತ್ಯಾಗ್ರಹ, ಬ್ರಿಟಿಷರ ದಬ್ಬಾಳಿಕೆ ಮೊದಲಾದವು, ಮಕ್ಕಳನ್ನು ಆಕರ್ಷಿಸುವ ಉದ್ಯಾನವನ, ಶಾಲೆ, ಪೇಟೆ ಬೀದಿ, ಮೃಗಾಲಯ, ಹಳ್ಳಿಜೀವನ, ಮಾದರಿ ಕುಟುಂಬ, ಅಜ್ಜಿ ಮೊಮ್ಮಕ್ಕಳಿಗೆ ಕಥೆ ಹೇಳುವ ದೃಶ್ಯ, ತ್ಯಾಜ್ಯ ವಿಲೇವಾರಿ, ಪರಿಸರ, ಮರಗಿಡಗಳು, ಹೊಲ, ಸೇತುವೆ, ದೇವಸ್ಥಾನ ಇವುಗಳ ದೃಶ್ಯಗಳು.

ಅಲ್ಲದೆ ವಿಜ್ಞಾನಕ್ಕೆ ಸಂಬಂಧಪಟ್ಟ ದಿನ ಬಳಕೆಯ ವಸ್ತುಗಳು, ಕ್ರೀಡೆ, ವಿಮಾನ, ಹಡಗು, ದೋಣಿ, ಉಡುಪು ಇವುಗಳಿಗೆ ಸಂಬಂಧಪಟ್ಟಂತೆ ಹಿಂದಿನ ಮತ್ತು ಈಗಿನ ವ್ಯತ್ಯಾಸಗಳನ್ನು ಗೊಂಬೆಗಳ ಮೂಲಕ ತೋರಿಸಬಹುದು. ಈಗ ಇವುಗಳನ್ನು ತಯಾರಿಸಲು ಮಾರುಕಟ್ಟೆಯಲ್ಲಿ ಪೂರಕ ಸಾಮಗ್ರಿಗಳು ಲಭ್ಯ. ಗೊಂಬೆ ಜೋಡಿಸಲು ಚಿಕ್ಕ ಹಾಗೂ ದೊಡ್ಡ ಮೆಟ್ಟಿಲುಗಳನ್ನು ಸಿದ್ಧಪಡಿಸಿ, ಅದರ ಮೇಲೆ ಹಾಸಲು ಸುಂದರವಾದ ಪೇಪರ್ ಬಟ್ಟೆ, ತೋರಣ, ರಂಗೋಲಿ, ಆಭರಣಗಳು, ಅಂಟಿನ ಕಾಗದಗಳು, ಪ್ಲಾಸ್ಟಿಕ್ ಹೂ ಬಳ್ಳಿಗಳು, ಯಂತ್ರಗಳ ಪುಟ್ಟ ಪುಟ್ಟ ಬಿಡಿ ಭಾಗಗಳು, ಮನುಷ್ಯನ ಅಂಗಂಗಗಳು, ಪ್ರಾಣಿಗಳು ಎಲ್ಲವೂ ಮಾರುಕಟ್ಟೆಯಲ್ಲಿ ದೊರೆಯುತ್ತದೆ. ದೊರೆಯುವ ಮಾಹಿತಿಗಳನ್ನೆಲ್ಲಾ ಸಂಗ್ರಹಿಸಿ, ಮಕ್ಕಳ ಮೂಲಕ ಟಿಪ್ಪಣಿ ಬರೆಸಿ ಈ ರೀತಿಯ ಬೊಂಬೆಗಳನ್ನು ಮಾಡಿಸಿ ಒಂದು ಅದ್ಭುತ ಲೋಕವನ್ನೇ ತೆರೆಯಬಹುದು.

### ಜೋಡಣೆಯ ಸಿದ್ಧತೆ

ಮೊದಲು ಜಾಗವನ್ನು ಹವಣಿಸಿಕೊಳ್ಳಿ. ಪ್ರತ್ಯೇಕವಾದ ಸ್ಥಳವಿದ್ದರೆ ಒಳ್ಳೆಯದು. ಡೈನಿಂಗ್ ಹಾಲ್‌ನಲ್ಲಿ ಗೊಂಬೆಗಳನ್ನು ಜೋಡಿಸಿ ಮನೆಯವರಿಗೆಲ್ಲಾ ಇರಿಸು ಮುರಿಸು ಮಾಡುವುದು. ಸ್ಥಳಾವಕಾಶಕ್ಕೆ ತಕ್ಕಂತೆ ಜೋಡಣೆಯನ್ನು ಮಿತಿಗೊಳಿಸಿ.

- ನಿಮಗೆ ಕರೆಯಬೇಕೆನಿಸಿದವರ ಒಂದು ಪಟ್ಟಿ ಮಾಡಿ; ಅವರಿಗೆ ಕೊಡಲು ಬಾಗಿನ ಸಿದ್ಧಪಡಿಸಿಕೊಳ್ಳಿ. ಹೆಚ್ಚುವರಿ ಬಾಗಿನಗಳು ಇರಲಿ.
- ಗೊಂಬೆಗಳ ಪ್ರದರ್ಶನಕ್ಕೆ ಭೇಟಿಗೆ ಸಮಯ ನಿಗದಿಗೊಳಿಸಿ, ನಿಮ್ಮದೇ ಆದ ದಿನನಿತ್ಯದ ಕೆಲಸಗಳಿಗೆ ಮತ್ತು ಮನೆಯವರ ದಿನಚರಿಗೆ ಭಂಗ ಬಾರದಂತೆ ನೋಡಿಕೊಳ್ಳಿ.
- ನಿಮ್ಮ ಖರ್ಚು ಮಿತವಾಗಿರಲಿ.
- ಅತಿಯಾದ ಆಯಾಸ, ಉದ್ವೇಗಕ್ಕೆ ಒಳಗಾಗದಿರಿ. ಆರೋಗ್ಯದ ಕಡೆ ಗಮನವಿರಲಿ.
- ಬಂದವರನ್ನೆಲ್ಲಾ ಏಕ ರೀತಿಯಿಂದ ಸಮಾನವಾಗಿ ಮಾತನಾಡಿಸಿ. ಬಂದದ್ದು ಸಾರ್ಥಕವಾಯಿತು ಎಂಬ ಭಾವನೆ ಮೂಡಲಿ. ಅತಿಯಾದ ಉಪಚಾರ ಬೇಡ.
- ಮಕ್ಕಳು ಮಾಡುವ ಕೆಟ್ಟ ಚೇಷ್ಟೆಗಳಿಗೆ ಕೋಪ ಬಂದರೂ 'ಏನೋ ಪಾಪ ಮಗೂಗೆ ಏನು ತಿಳಿಯುತ್ತೆ ಬಿಡಿ' ಎನ್ನುವ ಸಮಾಧಾನಕರ ಮಾತನ್ನಾಡಿ ಸಹನೆಯಿಂದ ವರ್ತಿಸಿ.
- ಬಾಗಿನದ ಸಾಮಾನುಗಳಾದ ಅರಿಶಿನ, ಕುಂಕುಮ, ಬಳೆ, ರವಿಕ ಕಣ, ತಾಂಬೂಲ, ತಿಂಡಿ ಎಲ್ಲವನ್ನೂ ಒಂದೇ ಕಡೆ ಓರಣವಾಗಿ ಜೋಡಿಸಿಟ್ಟುಕೊಳ್ಳಿ. ಎಲ್ಲವನ್ನೂ ಒಂದೇ ಬ್ಯಾಗಿಗೆ ಹಾಕಿಟ್ಟುಕೊಂಡರೂ ಸರಿ. ಕೊಡಲು ಸುಲಭ. ಮಕ್ಕಳಿಗೆ ಸಿಹಿ ತಿಂಡಿ ಇರಲಿ.
- ಕೇವಲ ಟಿ.ವಿ., ಪತ್ರಿಕೆಗಳಲ್ಲಿ ಬಂದರೆ ಮಾತ್ರ ಸಾರ್ಥಕತೆಯನ್ನು ಕಾಣದೆ, ಗೃಹಿಣಿಯು ತನ್ನ ನಾಲ್ಕಾರು ಗೆಳತಿಯರು, ಆತ್ಮೀಯರು ಬಂದು ನೋಡಿದರೆ ಸಾಕು ಎಂಬ ಧನ್ಯತೆಯ ಭಾವವಿರಲಿ. ನಿಮಗೆ ಬೊಂಬೆ ನೋಡಲು ನಿಮ್ಮ ಗೆಳತಿಯರ, ಬಂಧುಗಳಿಂದ ಆಹ್ವಾನ ಬಂದಿದೆಯೇ? ಹಾಗಾದರೆ ನಿಮ್ಮ ಆಗಮನ – ನಿರ್ಗಮನ ಹೀಗಿರಲಿ.
- ಹೇಳಿದ ಸಮಯದಲ್ಲೇ ಹೋಗಿ. ಮುಂಚೆ ಹೋಗುವುದು ಅಥವಾ ತಡ ಮಾಡಿ ಹೋಗುವುದನ್ನು ಮಾಡಿ ಅದಕ್ಕೆ ನಾನಾ ನೆಪಗಳನ್ನು ಕೊಡುತ್ತಾ ಹೋಗಬೇಡಿ.
- ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಹೋದಾಗ ಅತ್ಯಂತ ಜಾಗರೂಕರಾಗಿರಿ. ಅಲ್ಲಲ್ಲೇ ಹರಟುತ್ತಾ ನಿಂತು ಮಕ್ಕಳನ್ನು ಎಲ್ಲೆಂದರಲ್ಲೇ ಬಿಡಬೇಡಿ.
- ನಿಮ್ಮ ಮಗು ಇಟ್ಟಿರುವ ಗೊಂಬೆಯನ್ನು ಬೀಳಿಸಿಯೋ, ರಂಗೋಲಿಯನ್ನು ಅಳಿಸಿಯೋ ಅಥವಾ ಮತ್ತಾವುದೋ ಕೆಟ್ಟ ಚೇಷ್ಟೆಯನ್ನು ಮಾಡಿದಾಗ ಆ ಮಗುವನ್ನು ಅಲ್ಲಿಯೇ ಹೊಡೆದು, ಬಯ್ದು ವಾತಾವರಣವನ್ನು ಕೆಡಿಸಬೇಡಿ.
- ಯಾವ ಕಾರಣಕ್ಕೂ ಗೊಂಬೆಗಳನ್ನು ಮುಟ್ಟದೆ ದೂರದಿಂದಲೇ ನೋಡಿ ಆನಂದಿಸಿ.
- ಬೇರೆ ಮನೆಯವರ ಗೊಂಬೆ ಪ್ರದರ್ಶನವನ್ನು ಇಲ್ಲಿ ಹೋಲಿಸಬೇಡಿ. ಮನಸ್ಸಿನಲ್ಲಿಯೇ ತುಲನೆ ಮಾಡಿಕೊಳ್ಳಿ. ಮೆಚ್ಚುಗೆಯ ಒಂದೆರಡು ಮಾತನಾಡಿ.
- ಹೆಚ್ಚಿನ ಸಮಯದಲ್ಲಿ ಹರಟೆ ಹೊಡೆಯುತ್ತಾ ನಿಲ್ಲಬೇಡಿ. ಬೇರೆಯವರಿಗೆ ಜಾಗ ಕೊಡಿ. ಮನೆಯಾಕೆ ಬಂದವರನ್ನೆಲ್ಲಾ ಗಮನಿಸಿಕೊಳ್ಳ ಬೇಕಾಗುತ್ತದೆ.
- ಕೊಟ್ಟ ಆಹ್ವಾನಕ್ಕೆ ಧನ್ಯವಾದ ಹೇಳಿ ನೀಡಿದ ಬಾಗಿನವನ್ನು ತೆಗೆದುಕೊಂಡು ಹೊರಬನ್ನಿ.

ಬಾಲ್ಯವು ಮಕ್ಕಳ ಮನಸ್ಸನ್ನು ಅರಳಿಸುವ ಕಾಲ. ಆದ್ದರಿಂದ ಇಂತಹ ಗೊಂಬೆ ಹಬ್ಬಗಳಿಂದ ನಮ್ಮ ಸಂಸ್ಕೃತಿ, ಜ್ಞಾನಾರ್ಜನೆ, ಬಂದವರೊಡನೆ ಮಾತುಕತೆ, ಏಕಾಗ್ರತೆ, ಅಮ್ಮನಿಗೆ ಸಹಕಾರ, ಮನರಂಜನೆ ದೊರೆಯುತ್ತದೆ. ಆದರೆ ಈಗಿನ ಮಕ್ಕಳು ಟಿ.ವಿ., ಕಂಪ್ಯೂಟರ್, ಮೊಬೈಲ್‌ಗಳ ಒಡನಾಟ ಹೆಚ್ಚಿಸಿಕೊಂಡು ಏಕಾಂಗಿ ಜೀವನಕ್ಕೆ ವಾಲಿದ್ದಾರೆ. ಮಕ್ಕಳ ಬಾಲ್ಯವು ವಿವಿಧ ರೀತಿಯ ನೆನಪುಗಳಿಂದ ಸಮೃದ್ಧಿಯಾಗಿರಬೇಕು, ಇದಕ್ಕೆ ಹಬ್ಬಗಳು ಪೂರಕವಾಗಿವೆ.